ಆಂಟಿಯ ಪುಟ್ಟ ಮನೆ, ಅವರ ಅಂಗಳದಲ್ಲಿದ್ದ ತುಳಸಿ ಕಟ್ಟೆಯೊಳಗೆ ಪುಟ್ಟದಾಗಿ ಮೈ ನೆನೆಸಿಕೊಳ್ಳುತ್ತಿದ್ದ ಹಣತೆ, ಹಾಗೆಯೆ ಟೆರೆಸ್‌ನ ಇನ್ನೊಂದು ಬದಿಗೆ ಇಣುಕಿದರೆ, ಎರಡು ದಿನದ ಹಿಂದೆ ಬಕರೀದ್‌ಗೆ ಅಂತಾನೆ, ಜಾಕೀರ್ ಅಂಕಲ್ ಖರೀದಿಸಿದ್ದ ಎರಡು ಕುರಿಗಳು ನಾಳೆಯ ಪರಿವೆಯೇ ಇಲ್ಲದೆ ಸುಖವಾಗಿ ನಿದ್ರಿಸುತ್ತಿದ್ದವು. ರಾಯಣ್ಣ ಆಕಾಶಕ್ಕೆ ಕಣ್ಣು ನೆಟ್ಟು ಸಾಲಾಗಿ ಇರುವ ಮೂರು ಚುಕ್ಕಿಗಳನ್ನ ಹುಡುಕ ತೊಡಗಿದ 'ಇಲ್ಲಿ ಸಾಽಽಲಕ ಮೂರು ಚುಕ್ಕಿ ಅದಾವಲ ಅವುಕ್ಕ ಚೆನ್ನಮ್ಮನ ದಂಡಿ ಅಂತಾರ' ಅಂತ ಅವ್ವ ಹೇಳುತ್ತಿದ್ದುದು ನೆನಪಾಯಿತು. ಮನಸ್ಸಿನಲ್ಲಿ ಗೂಡು ಕಟ್ಟಿದ್ದ ಯೋಚನೆಗಳಿಗೆ ಯಾರೋ ಕಲ್ಲೆಸೆದಂತಾಗಿ ಟೆರೆಸ್‌ನ ತುದಿಯಲ್ಲಿ ಅವನ ಕಾಲುಗಳು ಇನ್ನಷ್ಟು ಗಟ್ಟಿಯಾಗಿ ನಿಂತವು, ಮನೆ ಮುಂದೆ ಬೆಳೆದಿದ್ದ ಮಳೆಗಾಲಕ್ಕೆ ಸರಿಯಾಗಿ ಕೇಸರಿ ಬಣ್ಣದ ಹೂ ಬಿಡುವ ದೊಡ್ಡ ಗಿಡವನ್ನ ನೋಡುತ್ತಾ 'ನಾ ವರ್ಸದ ಹಿಂದ ಧಾರವಾಡಕ್ಕ ಓದಾಕಂತ ಬಂದಾಗ ಹಿಂಗ ಹೂ ಬಿಟ್ಟು ನಿಂತಿದ್ದಿ' ಅಂತ ಗಿಡದೊಂದಿಗೆ ಮಾತಿಗಿಳಿದ.

ತಕ್ಷಣ ತಾನು ಓದಲು ಬಂದು ವರ್ಷಗಳು ಉರುಳಿದ್ದು ನೆನಪಾಗಿ ಸುಮ್ಮನೆ ನಿಂತ, ಉಸಿರು ಜೋರಾಗಿ ಎಳೆದುಕೊಂಡು ಕಣ್ಣಿನ ಉದ್ವೇಗವನ್ನ ಹತ್ತಿಕ್ಕಿದ, ಆದರೆ ಮನಸ್ಸು ತೊಯ್ದು ಹಿಪ್ಪೆಯಾಗಿತ್ತು. ಟೇರೆಸ್‌ಗೆ ಅಡ್ಡಲಾಗಿ ಹಾಕಿದ್ದ ಕಬ್ಬಿಣದ ಕಮಾನಿಗೆ ಬೆನ್ನು ಮಾಡಿ ನಿಂತ. ಪ್ರತಿ ತಿಂಗಳು ಹದಿನೈದು ನೂರು ಬಾಡಿಗೆ ಕಟ್ಟಿ ಇರುತ್ತಿದ್ದ, ಒಂದೆ ಪಡಸಾಲೆಯಂತೆ ಇರುವ ರೂಮು, ಅದಕ್ಕಿರುವ ಒಂದೇ ಒಂದು ದೊಡ್ಡ ಕಿಟಕಿ, ಪಾತ್ರೆ ಪಗಡೆ, ಬಟ್ಟೆ, ಗೋಡೆಗಂಟಿಸಿದ್ದ ಕ್ಯಾಲೆಂಡರ್ ಎಲ್ಲವೂ ಅವುಗಳ ಜಾಗದಲ್ಲಿ ವರ್ಷದ ಹಿಂದೆ ಇದ್ದಂತೆಯೇ ಅದೇ ಜಾಗದಲ್ಲಿದ್ದವು. ತಾನೂ ಅವುಗಳಲ್ಲೊಬ್ಬ ಅನ್ನಿಸತೊಡಗಿ ಹಿಂತಿರುಗಿ ಮತ್ತೆ ಕೇಸರಿ ಹೂವಿನ ಗಿಡ ನೋಡತೊಡಗಿದ. ಈ ಗಿಡ ಹೊಸದಾಗಿ ಬಂದಾಗ ಹೂ ತುಂಬಿಕೊಂಡು ನಿಂತಿತ್ತು ಬೇಸಿಗೆಯಲ್ಲಿ ಒಣಗಿ ಅಸ್ಥಿಪಂಜರದಂತಾಗಿತ್ತು, ಈಗ ಮತ್ತೆ ಹೂ ತುಂಬಿಕೊಂಡು ನಿಂತಿದೆ 'ಅಬ್ಬಾ... ಈ ಗಿಡದಲ್ಲಿ ಅದೆಷ್ಟು ಬದಲಾವಣೆಗಳು! ಆದರೆ ನನ್ನಲ್ಲಿ?' ಅಂತ ಅಂದುಕೊಳ್ಳುತ್ತ ಸಮಯ ಸರಿದ ಅರಿವು ಇರದೆ

